◆ **ನೀವು ಮೊದಲು ಲಕ್ಷ್ಮೀನರಸಯ್ಯ ಆಗಿದ್ದವರು, ಲಕ್ಷ್ಮೀಶ ಆದ್ರಿ. ಆಮೇಲೆ ಲಕ್ಷ್ಮಣದಾಸ್ ಆಗಿದ್ದು ಹೇಗೆ?**

ನನ್ನ ರೆಕಾರ್ಡ್ಸ್‌ನಲ್ಲಿ ಲಕ್ಷ್ಮೀನರಸಯ್ಯ ಅಂತ ಇತ್ತು. ಎಸ್ಸೆಸ್ಸೆಲ್ಸಿ, ಪಿಯುಸಿಯ ಮಾರ್ಕ್ಸ್‌ಕಾರ್ಡ್‌ನಲ್ಲಿ ಲಕ್ಷ್ಮೀನರಸಯ್ಯ ಅಂತ ಇತ್ತು. ಇತ್ತೀಚೆಗೆ ಲಕ್ಷ್ಮಣದಾಸ್ ಅಂತ ಹೆಸರು ಬದಲಾಯಿಸಿಕೊಂಡೆ. ಲಕ್ಷ್ಮೀನರಸಯ್ಯ ಅನ್ನುವ ನಾನು ಲಕ್ಷ್ಮಣದಾಸ್ ಎಂಬ ಹೆಸರಾಗಿದ್ದು ಕೊರಟಗೆರೆಯಲ್ಲಿ. ಹೆಸರಿನ ಕ್ರೆಡಿಟ್ ಕೊರಟಗೆರೆಗೆ ಸಲ್ಲಬೇಕು. ಆ ಹೆಸರು ಪಡೆದದ್ದೇ ಒಂದು ಘಟನೆಯಲ್ಲಿ. ಅದು ವೃತ್ತಿಗೆ ಸೇರಿದ ಕೊರಟಗೆರೆಯಲ್ಲಿ ನಡೆದದ್ದು ಅದು. ಆಗ, ಕಥನಕೀರ್ತನ ಒಂದು ವರ್ಗಕ್ಕೆ ಮೀಸಲಾಗಿತ್ತು. ಅದನ್ನು ಎಲ್ಲರೂ ಮಾಡುವುದಕ್ಕೆ ಆಗ್ತಾ ಇರಲಿಲ್ಲ, ಆಗಿನ ಕಾಲದಲ್ಲಿ. ಬ್ರಾಹ್ಮಣರು ಬಿಟ್ಟರೆ ಬೇರೆ ಯಾವ ಜಾತಿಯವರು ಹರಿಕಥೆ ಮಾಡ್ತಾ ಇರಲಿಲ್ಲ. ಆ ಕಾಲದಲ್ಲೇ ಗುರುರಾಜುಲು ನಾಯ್ಡು ಅವರು ಬೇರೆ ಕಡೆಯಿಂದ ಬಂದು ಹರಿಕಥೆ ಮಾಡುವುದಕ್ಕೆ ಶುರು ಮಾಡಿದ್ರು. ನಾನು ಯಾಕೆ ಆ ಕಥೆಗೆ ಹೋಗಬಾರದು ಅಂತ ಮನಸ್ಸು ಬಂತು. ಆದರೆ ಕಲಿಸುವವರು ಯಾರೂ ಇರಲಿಲ್ಲ. ಯಾರು ಹೇಳಿಕೊಡುತ್ತಾರೆ ಆಗಿನ ಕಾಲದಲ್ಲಿ? ಹರಿಕಥೆ ಪರಂಪರಾಗತವಾಗಿ ಬಂದಂಥ ಕಲೆ. ಹರಿಕಥೆ ಮಾಡುವ ಕುಟುಂಬಗಳಲ್ಲಿ ಅಪ್ಪನೂ ಹರಿಕಥೆ ಮಾಡ್ತಿದ್ದ, ಮಗನೂ ಹರಿಕಥೆ ಮಾಡ್ತಿದ್ದ. ಹೀಗೆ ಸಂಪ್ರದಾಯಸ್ಥ ಕುಟುಂಬದಿಂದ ಬಂದವರಿಗೆ ಹರಿಕಥೆ ಸಿದ್ಧಿಸುತ್ತಿತ್ತು. ಒಂದು ವರ್ಗಕ್ಕೆ ಸೀಮಿತವಾದ ಕಲೆ ಅದಾಗಿತ್ತು. ಅದನ್ನು ಒಡೆದುಕೊಂಡು ಮುಂದಕ್ಕೆ ಬರಬೇಕಲ್ಲ, ಏನು ಮಾಡುವುದು? ಆಗ ನನಗೆ ಪ್ರೇರಣೆಯಾಗಿದ್ದೇ ಗುರುರಾಜುಲು ನಾಯ್ಡು ಅವರ ಹರಿಕಥೆಗಳು. ನಾನು ನಾಟಕಗಳಲ್ಲಿ ಪಾತ್ರ ಮಾಡಿ ಅನುಭವ ಇದ್ದುದ್ದರಿಂದ, ಹರಿಕಥೆ ಕಲಿಯಲು ಕಷ್ಟ ಅನಿಸಲಿಲ್ಲ.

ಕೊರಟಗೆರೆಯಲ್ಲಿ ವಿದ್ಯಾ ಇಲಾಖೆಯಲ್ಲಿ ನೌಕರಿಯಲ್ಲಿದ್ದಾಗ ಊರಿನ ಮಧ್ಯದಲ್ಲಿ ಯಾರದೋ ಹರಿಕಥೆ ಆಯೋಜನೆ ಆಗಿತ್ತು. ನಾನು ಅಲ್ಲಿಗೆ ಹೋಗಲು ಆತುರ ಮಾಡ್ತಿದ್ದೆ. ಆದೇ ಹೊತ್ತಿನಲ್ಲಿ, ನಮ್ಮ ವಿದ್ಯಾ ಇಲಾಖೆಯ ಕಚೇರಿಯಲ್ಲಿ ಒಬ್ಬ ಮೇಷ್ಟ್ರು ನನ್ನ ಆತುರ ಗಮನಿಸಿದ 'ಅಲ್ಲಿಗೆ ಹೋಗಿ ನೀನೇನು ಹರಿಕಥೆ ಮಾಡ್ತೀಯಾ?' ಅಂದ. ಆಗಿನ್ನೂ ನನಗೆ ಇಪ್ಪತ್ತೆರಡು, ಇಪ್ಪತ್ತಮೂರು ವರ್ಷ ವಯಸ್ಸು. ಅದು 1973ನೇ ಇಸವಿ. ಆತ ಮುಂದುವರಿದು, 'ಬಂದ್ಬಿಟ್ಟ. ಅಲ್ಲೋಗಿ ಕಥೆ ಮಾಡ್ತಾನಂತೆ ಇವ್ನು, ನಿನ್ ಕೆಲ್ಸ ನೀನ್ ಮಾಡಯ್ಯ' ಅಂದ. ಅದು ನನ್ನ ಮನಸಿಗೆ ನೋವುಂಟು ಮಾಡಿತು. ಅಲ್ಲಿನ ಪ್ರಿನ್ಸಿಪಾಲ್ ಎಂ.ಎನ್. ಅಬ್ದುಲ್ ಸಮದ್ ಅಂತಿದ್ರು. ತುಂಬಾ ದೊಡ್ಡ ವ್ಯಕ್ತಿತ್ವ ಅವರದು. ಆಮೇಲೆ ಆತನಿಗೆ ಅಲ್ಲೇ ಹೇಳಿದೆ. 'ನೀನು ಚಾಲೆಂಜ್ ಮಾಡಿದರೆ ನಾನು ಹರಿಕಥೆ ಮಾಡೇ ಮಾಡ್ತೀನಿ' ಎಂದೆ. ಅದಕ್ಕೆ ಅವನು 'ಮಾಡೋ ನೋಡೋಣ'

